ಕಳೆದುಕೊಳ್ಳುವ ಜನರು ಬಡವರು ಆಗಿರುತ್ತಾರೆ. ಇಂಥ ಭೂಮಿಯನ್ನು ಅಧಿಕಾರಿಗಳು ಕಾಗದದಲ್ಲಿ ಸಿ ಎಂಡ್ ಡಿ ಭೂಮಿಯನ್ನು ಅರಣ್ಯ ಇಲಾಖೆಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅರಣ್ಯ ಇಲಾಖೆಯವರು ಸುಮಾರು ೭೫ ಸಾವಿರ ಎಕರೆ ಅರಣ್ಯ ಭೂಮಿಯನ್ನು ಕೆ ಪಿ. ಸಿ, ಯವರಿಗೆ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಈಗ ಇಲ್ಲಿರತಕ್ಕಂಥ ಭೂಮಿ ಯಾವುದು ? ಅಂದರೆ ಈ ಪ್ರದೇಶದಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಬಂದ ಜಮೀನು ಯಾವ ವರ್ಗಕ್ಕೆ ಸೇರಿದ್ದು ? ಇದು ಪಡ ಭೂಮಿಯೋ ? ಹುಲ್ಲುಗಾವಲೋ ? ಅಥವಾ ಸಿ ಎಂಡ್ ಡಿ ಭೂಮಿಯೋ ಅಥವಾ ಅರಣ್ಯ ಇಲಾಖೆಗೆ ಸೇರಿದ ಭೂಮಿಯೋ ಎಂಬ ಬಗ್ಗೆ ಮಾನ್ಯ ಸಚಿವರು ಪರಿಶೀಲಿಸಿ ಹೇಳ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇಲ್ಲಿ ಮಾನ್ಯ ಸಚಿವರು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂಮಿಯ ವಿವರ ಗಳನ್ನು ಕೊಟ್ಟಿದ್ದಾರೆ. ಇವನ್ನು ಕೊಡುವುದಕ್ಕೆ ಮುಂಚೆ ವಿವರಗಳನ್ನು ಕೊಡುವಂತೆ ಕೇಳಿಕೊಂಡು ಅರ್ಜಿಗಳನ್ನು ಕರೆದಿದ್ದೀರಾ ? ಇಲ್ಲಿ ಕೊಟ್ಟಿರತಕ್ಕಂಥ ತಾಲ್ಲೂಕುವಾರು ಅಂಕಿ ಅಂಶಗಳು ಯಾವ ಮೂಲಕ ತಮಗೆ ಬಂದುವು ಎಂದು ದಯವಾಡಿ ತಿಳಿಸಬೇಕು. ಭೂ ಮಂಜೂರಾತಿ ಮಾಡಲು ಅರ್ಜಿಗಳನ್ನು ಯಾವಾಗ ಕರೆದಿದ್ದಿರಿ ? ಅದಕ್ಕೆ ಕೊನೇ ದಿನಾಂಕ ಯಾವುದು ಇದು ಯಾವುದೂ ಬಗರ್‌ಹುಕುಂಸವರೆಗೆ ಗೊತ್ತಿಲ್ಲ. ದಯವಿಟ್ಟು ವಿವರವಾಗಿ ಇವನ್ನೆಲ್ಲ ಹೇಳಬೇಕು.

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಸಚಿವರು).—ಈಗ ನಾನು ಕೊಟ್ಟಿರುವ ಅಂಕಿ ಸಂಖ್ಯೆ ಗಳು ಸರ್ಕಾರದ ೮ವಿನ್ಯೂ ಇಲಾಖೆ ದಾಖಲೆಗಳಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವವರು ಎಂದು ನಮೂದಾಗಿರುವುದನ್ನು ಆಧರಿಸಿದ್ದು, ಫಾರೆಸ್ಟ್ ಇಲಾಖೆಯವರ ಅಂಕಿ ಅಂಶಗಳು ಇದರಲ್ಲಿ ಲಗತ್ತಾಗಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್.—ನಾನು ಕೇಳಿದ ಪ್ರಶ್ನೆ, ತಲೆತಲಾಂತರದಿಂದ ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ಸರ್ಕಾರದವರು ಅರಣ್ಯ ಭೂಮಿಯೆಂದು, ಸಿ ಮತ್ತು ಡಿ ಭೂಮಿ ಯೆಂದು ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ ಆದರೆ ನೂರಾರು ವರ್ಷಗಳಿಂದ ಯಾರು ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವರೋ ಅವರಿಗೆ ಪಟ್ಟಾ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ? ಈಗಾಗಲೇ ಅನ್ಯಾಯವಾಗಿ ಅರಣ್ಯ ಇಲಾಖೆಗೆ ಮತ್ತು ಖಾಸಗಿ ಜನರಿಗೆ ಕೊಟ್ಟಿರುವ ಭೂಮಿಯನ್ನು ವಾಪಸ್ ತೆಗೆದುಕೊಳ್ಳುವುದನ್ನು ಪರಿಶೀಲಿಸುತ್ತೀರಾ ?

ಶ್ರೀ ಕೆ. ಹೆಚ್, ಪಾಟೀಲ್.—ಬಗರ್‌ಹುಕುಂ ಆಗಿರುವ ಫಾರೆಸ್ಟ್ ಜಮೀನನ್ನು ಸಕ್ರಮಗೊಳಿ ಸುವ ಕಕ್ಷೆಯಲ್ಲಿ ಇದು ಬರುವುದಿಲ್ಲ. ಆ ತರಹ ಕೊಡಬೇಕೆಂದು ನೀವು ಹೇಳುವುದಾದರೆ ನಮ್ಮ ಸರ್ಕಾರ ಕೇಂದ್ರದ ಫಾರೆಸ್ಟ್ ಆಕ್ಟ್ ಏನಿದೆ ಅದರ ಮುಖಾಂತರ ಕೇಂದ್ರಕ್ಕೆ ವಿಚಾರ ಮಾಡುವುದು.

ಶ್ರೀ ಬಿ. ಹೆಚ್. ಬನ್ನಿಕೋಡ್.—ಹುಲ್ಲುಗಾವಲಿಗೆಂದು ಬಿಟ್ಟಿದ್ದ ಜಮೀನನ್ನು ಸಾಗುವಳಿದಾರರಿಗೆ ಕೊಡುವ ವಿಚಾರ ಸರ್ಕಾರಕ್ಕೆ ಇದೆಯೇ ?

ಶ್ರೀ ಕೆ. ಹೆಚ್. ಪಾಟೀಲ್.—ಇಲ್ಲ, ಸರ್ಕಾರ ಆ ಬಗ್ಗೆ ಆಲೋಚನೆ ಮಾಡಿಲ್ಲ.

ಅಧ್ಯಕ್ಷರು.—ರಾಮಲಿಂಗಾರೆಡ್ಡಿಯವರು ಅಬ್ಸೆಂಟ್. ನೆಕ್ಸ್ಟ್.

ರೈತರಿಗೆ ಟ್ರ್ಯಾಕ್ಟರುಗಳ ವಿತರಣೆ

೮. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದ ಕೃಷಿ ಸಹಕಾರ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಮೂಲಕ ೧೯೮೮–೮೯ ಮತ್ತು ೧೯೮೯–೯೦ ರಲ್ಲಿ ರೈತರಿಗೆ ವಿತರಿಸಲಾದ ಟ್ರ್ಯಾಕ್ಟರುಗಳ ಸಂಖ್ಯೆ ಎಷ್ಟು ?

ಆ) ಟ್ರ್ಯಾಕ್ಟರುಗಳನ್ನು ಹೊಂದಿರುವ ರೈತರುಗಳು ಸಕಾಲದಲ್ಲಿ ಸಾಲದ ಕಂತನ್ನು ಮರು ಪಾವತಿ ಮಾಡಿದರೆ ಬಡ್ಡಿ ರಿಯಾಯಿತಿ ದರವೆಷ್ಟು ?

ಇ) ಈ ರಿಯಾಯಿತಿ ಬಡ್ಡಿ ದರದ ಸೌಲಭ್ಯ ಯಾವ ವರ್ಷದಿಂದ ಜಾರಿಗೊಳಿಸಲಾಗಿದೆ.

ಡಾ. ಹೆಚ್. ಆರ್ ರಾಜು (ಸಹಕಾರ ರಾಜ್ಯ ಮಂತ್ರಿಗಳು),—

(ಅ) ೧೯೮೮–೮೯—ಸಂಖ್ಯೆ : ೨೦೯೫

೧೯೮೯–೯೦—ಸಂಖ್ಯೆ : ೬೨೨

(ಆ) ದಿನಾಂಕ : ೨೮-೩-೯೯ ರ ವರೆವಿಗೆ ಶೇ. ೭ ತದನಂತರ ಈ ಸೌಲಭ್ಯವನ್ನು ನಿಲ್ಲಿಸಲಾಗಿದೆ)

(ಇ) ೧೯೮೨-೮೩ (ಸರ್ಕಾರಿ ಆದೇಶದ ದಿನಾಂಕ ೧೧-೪-೧೯೮೩) (ದಿನಾಂಕ ೨೮-೩-೧೯೮೯ ರ ವರೆವಿಗೆದ

ಶ್ರೀ ಜಿ. ರಾಜು ಗೌಡ.—ಟ್ರಾಕ್ಟರುಗಳನ್ನು ಕೊಂಡುಕೊಂಡಿರುವ ರೈತರು ಸಕಾಲದಲ್ಲಿ ಸಾಲದ ಕಂತನ್ನು ಮರು ಪಾವತಿ ಮಾಡಿದರೆ ಅವರಿಗೆ ಬಡ್ಡಿ ರಿಯಾಯತಿಯನ್ನು ಕೊಡಬೇಕೆಂದು ರಾಜ್ಯದ ಶ್ರೇಷ್ಠ ನ್ಯಾಯಾಲಯವು ಆದೇಶ ಕೊಟ್ಟಿತು. ಆದರೂ ಕೂಡ ಇವರು ರೈತರಿಗೆ ಈ ಸೌಲಭ್ಯವನ್ನು ಕೊಡದೆ ಜಾಸ್ತಿ ವಸೂಲಿ ಮಾಡುತ್ತಿದ್ದಾರೆ ಇದು ಶ್ರೇಷ್ಠ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿ ವರ್ತಿಸಿದ ಹಾಗೆ ಆಗುವುದಿಲ್ಲವೇ ?

ಡಾ॥ ಹೆಚ್. ಆರ್. ರಾಜು.—೨೯-೩-೧೯೮೯ರವರೆಗೆ ಈ ಸೌಲಭ್ಯವನ್ನು ಕೊಡಲಾಗಿತ್ತು. ನಂತರ ನಬಾರ್ಡ್‌ನವರು ಈ ಸೌಲಭ್ಯವನ್ನು ವಾಪಸ್ಸು ಪಡೆದುಕೊಂಡಿದ್ದರಿಂದ ನಿಲ್ಲಿಸಬೇಕಾಗಿತ್ತು. ಈಗ ಶೇಕಡ ೧೨.೫ರಷ್ಟು ಬಡ್ಡಿಯನ್ನು ವಸೂಲು ಮಾಡುತ್ತಿದ್ದೇವೆ. ಮೊದಲು ಶೇಕಡ ೭ ಇತ್ತು ಶೇಕಡ ೫.೫ರಷ್ಟು ಬಡ್ಡಿಯನ್ನು ಸರ್ಕಾರ ಕೊಡುತ್ತಿತ್ತು.

ಶ್ರೀ ಜಿ. ರಾಜು ಗೌಡ.—ಇದಾದ ನಂತರ ಶೇಕಡ ೭ರಷ್ಟು ವಸೂಲು ಮಾಡಿದ ಮೇಲೆ ರಾಜ್ಯದ ಶ್ರೇಷ್ಠ ನ್ಯಾಯಾಲಯ ಇದರ ಬಗ್ಗೆ ತೀರ್ಪು ನೀಡಿದೆ. ಅವರು ಶೇಕಡ ೭ ರಷ್ಟು ಬಡ್ಡಿಯನ್ನು ತೆಗೆದು ಕೊಳ್ಳಬೇಕೆಂದು ಆದೇಶ ಕೊಟ್ಟ ಮೇಲೆ ತಾವು ಈ ಬಗ್ಗೆ ಕೋರ್ಟಿನ ಆದೇಶವನ್ನು ಪಾಲಿಸುತ್ತಿಲ್ಲವೇ ಇಲ್ಲವೋ ?

ಡಾ॥ ಹೆಚ್. ಆರ್. ರಾಜು.—ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ರಾಜ್ಯದ ಕಾರ್ಮಿಕ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳ ಬಗ್ಗೆ

೬೭. ಶ್ರೀ ಎ. ಕೃಷ್ಣಪ್ಪ, (ವರ್ತೂರು).—ಮಾನ್ಯ ಕುದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಕಾರ್ಮಿಕ ನ್ಯಾಯಾಲಯಗಳಲ್ಲಿ ಈಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಆ) ಇವುಗಳು ವಿಲೇವಾರಿಯಾಗದೆ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಶ್ರೀ ಕೆ. ಎಚ್. ಪಾಟೀಲ್ (ಕುದಾಯ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ೮,೪೧೩.

ಆ) ಈ ಕೆಳಕಂಡ ಪ್ರಮುಖ ಕಾರಣಗಳಿಂದಾಗಿ ಮೊಕದ್ದಮೆಗಳು ವಿಲೇವಾರಿಯಾಗಲು ವಿಳಂಬವಾಗುತ್ತಿದೆ.

೧. ಪ್ರಕರಣಗಳ ಹಿಯರಿಂಗ್ ಸಮಯದಲ್ಲಿ ಕಾರ್ಮಿಕ ಸಂಘದ ಪರವಾಗಿ ಮತ್ತು ಆಡಳಿತ ವರ್ಗದ ಪರವಾಗಿ ಆಗಿಂದಾಗ್ಗೆ ಹಿಯರಿಂಗ್ ಮಾಡುವುದು.

೨. ಸಾಕಷ್ಟು ಸಂಖ್ಯೆಯಲ್ಲಿ ನ್ಯಾಯಾಲಯಕ್ಕೆ ಹೋಗಲು ಕೈಗಾರಿಕಾ ವಿವಾದ ಕಾಯ್ದೆಯನ್ವಯ ಅನುವು ಮಾಡಿರುವುದರಿಂದಲೂ ಅದಕ್ಕಾಗಿ ವಿವಾದವು ನ್ಯಾಯಾಲಯಗಳಲ್ಲಿ ದಾಖಲಾಗಿರುವುದರಿಂದಲೂ,

೩. ಪ್ರಕರಣಗಳನ್ನು ವಿಲೇವಾರಿ ಮಾಡಲು ಸಾಕಷ್ಟು ಸಂಖ್ಯೆಯಲ್ಲಿ ಕಾರ್ಮಿಕ ನ್ಯಾಯಾಲಯಗಳ ಕೊರತೆ.

೪. ಪ್ರಕರಣಗಳ ವಿಲೇವಾರಿ ಹಂತದಲ್ಲಿ ಉಚ್ಚ ನ್ಯಾಯಾಲಯದಿಂದ ಬರುವ ತಡೆಯಾಜ್ಞೆಗಳು ಅದಕ್ಕೆ ಕಾರಣಗಳು.

SRI A KRISHNAPPA.—In your answer you have stated "Individual workman can approach the Labour Court directly inview of the amendment." ಅವರಿಗೆ ಪ್ರಿವಿಲೆಜ್ ಮಾಡಿಕೊಟ್ಟಿದೆ. ಸರ್ಕಾರ ತಿದ್ದುಪಡಿ ತರುವುದರ ಮುಖಾಂತರ ಕ್ರಮ ಕೈಗೊಂಡಿದ್ದರಿಂದ ಕೇಸ್‌ಗಳು ಈಗ ಜಾಸ್ತಿಯಾಗಿವೆ. ೨೮೦೫ ಕೋರ್ಟ್‌ಗಳು ಲೇಬರ್ ಕೋರ್ಟ್‌ನಲ್ಲಿ ಬಾಕಿ ಇದೆ. ಆದರೆ ಎಷ್ಟು ವರ್ಷಗಳಿಂದ ಬಾಕಿ ಇದೆ ಎಂದು ಹೇಳಿಲ್ಲ. ಲೇಬರ್ ಕೋರ್ಟ್‌ಗಳು ಬಹಳ ಕಡಿಮೆ ಇವೆ. ಕರ್ನಾಟಕ ರಾಜ್ಯದಲ್ಲಿ ಹೀಗಾಗಿ ಕೇಸುಗಳು ಜಾಸ್ತಿ ಇವೆ ಎಂದು